

**★ *ಓದುಗ, ಸಾಹಿತಿ, ಆಡಳಿತಗಾರ, ಹೋರಾಟಗಾರ- ಇದರಲ್ಲಿ ಯಾವ ಜವಾಬ್ದಾರಿ ಹೆಚ್ಚು ಖುಷಿ ಕೊಟ್ಟಿದೆ?***

ತುಂಬಾ ಜವಾಬ್ದಾರಿ ನಿರ್ವಹಿಸಿದ್ದೇನೆ. ಜೀವನದಲ್ಲಿ ಒಂದು ತೃಪ್ತಿಕೊಟ್ಟ ಸಂಗತಿ ಎಂದರೆ, 1974ರ ನಂತರ ಬೆಂಗಳೂರಿನ ಕೊಳೆಗೇರಿಗಳಲ್ಲಿ ಸುಮಾರು 15 ರಾತ್ರಿ ಶಾಲೆಗಳನ್ನು ನಡೆಸುತ್ತಿದ್ದೆ. ಅದಕ್ಕೆ ಅನೇಕರು ಒತ್ತಾಸೆಯಾಗಿ ನಿಂತಿದ್ದರು. ಬೇರೆ ಬೇರೆ ಕಾಲೇಜುಗಳ ಅಧ್ಯಾಪಕರು ರಾತ್ರಿ ಶಾಲೆಗೆ ಬಂದು ಉಚಿತವಾಗಿ ಪಾಠ ಮಾಡಿಹೋಗುತ್ತಿದ್ದರು. ಆ ಪ್ರದೇಶದಲ್ಲಿ ಎಸ್ಸೆಸ್ಸೆಲ್ಲಿ ಫೇಲಾಗಿ ಪೋಲಿ ಬಿದ್ದು ಸುತ್ತುತ್ತಿದ್ದ ನೂರಾರು ಯುವಕರನ್ನು ಹಿಡಿದು ಮನವೊಲಿಸಿ ತರಗತಿಗೆ ಕೂರಿಸುತ್ತಿದ್ದೆ. ಅಲ್ಲಿ ಓದಿದ ಸುಮಾರು ಮಂದಿ ಒಳ್ಳೆಯ ಸ್ಥಾನವನ್ನು ಪಡೆದಿದ್ದಾರೆ. ಸರ್ಕಾರದ ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಅವರು ಎಂದಾದರೂ ಸಿಕ್ಕಾಗ 'ರೌಡಿಯಾಗಿ ನಮ್ಮ ಜೀವನ ಅವಸಾನವಾಗುತ್ತಿತ್ತು. ನೀವು ನೀಡಿದ ನಮ್ಮ ಬದುಕಿನ ತಿರುವು ಈ ಸ್ಥಾನಕ್ಕೆ ತಂದಿದೆ' ಎಂದು ಗೌರವಪೂರ್ವಕವಾಗಿ ಹೇಳುತ್ತಾರೆ. ಅದು ನನ್ನ ಬದುಕಿಗೂ ಸಾರ್ಥಕತೆ ಕೊಟ್ಟಿದೆ. ಅದೇ ನನ್ನ ಅವಿಸ್ಮರಣೀಯ ಸಂದರ್ಭ.

**★ ಹೋರಾಟದ ತಮಟೆಗೆ ಬಿಸಿ ತುಂಬಿದ ನಿಮ್ಮ ಬರಹ ಈಗೇಕೆ ತಾಮಸದತ್ತ ವಾಲಿದೆ?**

ಹೋರಟಕ್ಕಾಗಿ ಕವಿತೆ ಬರೆದಿದ್ದು ನಿಜ. ಈಗಿನ ಬರಹ ತಾಮಸ ಎನ್ನವುದಕ್ಕಿಂತ ಸಾತ್ವಿಕ ಎನ್ನಬಹುದು. ಆದರೆ ನನ್ನ ಮೂಲ ವಿಚಾರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಮುಂದೊಮ್ಮೆ 'ಇಕ್ಕರ್ಲಾ ಒದಿರ್ಲಾ' ಎಂಬ ಕಾವ್ಯವನ್ನೂ ಬರೆಯುವ ಕಾಲ ಬಂದರೂ ಬರಬಹುದು. ಆದರೆ ಸದ್ಯ ಸಾತ್ವಿಕತನ ನನ್ನದು.

**★ ಸಮ್ಮೇಳನದ ಜವಾಬ್ದಾರಿಯನ್ನು ದೇವನೂರು ಮಹಾದೇವ ನಿರಾಕರಿಸಿದರು. ಅವರ ಆಶಯವನ್ನು ಹೇಗೆ ತೆಗೆದುಕೊಳ್ಳುತ್ತೀರಿ?**

ದೇವನೂರು ಮಹದೇವ ಅವರು ಯಾವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆಯೋ, ಅದೇ ವಿಷಯವನ್ನು ಪ್ರಧಾನವಾಗಿ ಸಮ್ಮೇಳನದಲ್ಲಿ ಪ್ರತಿಪಾದಿಸುತ್ತೇನೆ. ನಿಜಕ್ಕೂ ಅವರು ಒಪ್ಪಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಅಧ್ಯಕ್ಷ ಸ್ಥಾನದಲ್ಲಿದ್ದು ಅದೇ ಮಾತುಗಳನ್ನು ಅವರು ಆಡಿದ್ದರೆ ಅದರ ಮೌಲ್ಯ ಇನ್ನೂ ಹೆಚ್ಚುತ್ತಿತ್ತು. ಫಲಿತಾಂಶದ ನಿರೀಕ್ಷೆ ತುರ್ತಾಗುತ್ತಿತ್ತು. ಈಗಲೂ ಅವರ ಆಶಯ ನನ್ನ ಆಶಯ ಕೂಡ. ಎಲ್ಲದಕ್ಕಿಂತ ಪ್ರತಿ ಸಮ್ಮೇಳನದ ನಿರ್ಣಯದ ಅನುಷ್ಠಾನದ ಬಗ್ಗೆ ಹೆಚ್ಚು ಶಿಸ್ತುಬದ್ಧವಾಗಬೇಕು ಎಂಬುದನ್ನು ಪ್ರತಿಪಾದಿಸುತ್ತೇನೆ.

**★ ನಿಮ್ಮದು ಎಡಪಂಥೀಯ ಒಲವಿತ್ತು. ರಾಜಕೀಯದಲ್ಲಿ ಬಲಪಂಥದತ್ತ ವಾಲಿದಿರಿ ಎಂದು ನಿಮ್ಮ ಅಭಿಮಾನಿಗಳೇ ಅಸಮಾಧಾನ ವ್ಯಕ್ತಪಡಿಸುತ್ತಾರೆ...?**

ನಾನು ಎಂದೂ ಸಾಂಪ್ರದಾಯಿಕ ಎಡಪಂಥೀಯವಾದಿ ಆಗಿಲ್ಲ. ಆದರೆ ಉದಾರವಾದಿ ಮಾನವೀಯತೆಗೆ ಹೆಚ್ಚು ಒತ್ತು ಕೊಡುವ ನೆಲೆಯ ಎಡಪಂಥೀಯ ನಿಲುವು ನನ್ನದು. ಮುಕ್ತಮನಸ್ಸಿನಿಂದ ಯೋಚಿಸುವುದನ್ನು ನಾನು ಅಭ್ಯಾಸ ಮಾಡಿಕೊಂಡಿದ್ದೇನೆ. ಆರೋಗ್ಯಕರ ವಿಚಾರ– ಮಾನವೀಯ ಅಂತಃಕರಣದ ಆಶಯ ಎಲ್ಲಿಂದ ಬಂದರೂ ಸ್ವೀಕರಿಸಬೇಕು ಎನ್ನುವ ವಿಚಾರ ನನ್ನದು. ಜೀವನದಲ್ಲಿ ಮಾನವೀಯತೆಯೇ ದೊಡ್ಡದು. ಎಡಪಂಥ, ಬಲಪಂಥ, ಮಧ್ಯಮ ಮಾರ್ಗ ಎನ್ನುವುದಕ್ಕಿಂತ ಮಾನವೀಯತೆಯಲ್ಲಿ ನನಗೆ ನಂಬಿಕೆ ಇದೆ.

**★ ದೈನಂದಿನ ವಿದ್ಯಮಾನಗಳಿಗೆ ತಕ್ಷಣ ನೀವು ಪ್ರತಿಕ್ರಿಯೆ ನೀಡುವುದಿಲ್ಲ. ನಿಮ್ಮ ಅನುಯಾಯಿಗಳು ನಿರೀಕ್ಷಿಸುತ್ತಾರೆ. ನೀವೇಕೆ ಹಿಂದೇಟು ಹಾಕುತ್ತೀರಿ?**

ಪ್ರತಿಕ್ರಿಯೆ ನೀಡುವುದರಲ್ಲಿ ನಾನು ಸ್ವಲ್ಪ ಹಿಂದೆ. ಕೆಲವೊಮ್ಮೆ ನಾವು ನೀಡುವ ಪ್ರತಿಕ್ರಿಯೆ ಸರಿ ಇರುತ್ತೆ, ಕೆಲವೊಮ್ಮೆ ತಪ್ಪಾಗಿರುತ್ತೆ. ಅದನ್ನು ನಾವು ಖಚಿತ ಪಡಿಸಿಕೊಳ್ಳಬೇಕು. ಒಂದು ವಿಷಯಕ್ಕೆ ಎರಡು ಮುಖಗಳಿರುತ್ತವೆ. ಅದನ್ನು ಖಚಿತ ಪಡಿಸಿಕೊಳ್ಳಲು ಸಮಯ ಬೇಕು ಎನ್ನುವ ನನ್ನ ಮನಸ್ಥಿತಿ ಕೂಡ ಅದಕ್ಕೆ ಕಾರಣ ಇರಬಹುದು. ಅನೇಕ ಸಂದರ್ಭದಲ್ಲಿ ಪತ್ರಿಕೆಗಳು– ಟಿ.ವಿ ಪ್ರತಿನಿಧಿಗಳು ಕೇಳಿದಾಗ ನಾನು ಪ್ರತಿಕ್ರಿಯೆ ನೀಡಿದ್ದೇನೆ. ಸ್ವಯಂ ನಾನೇ ಪತ್ರಿಕೆಗೆ ಫೋನ್ ಮಾಡಿ ಇದಕ್ಕೆ ನಾನು ಖಂಡಿಸುತ್ತೇನೆ, ಇದನ್ನು ನಾನು ವಿರೋಧಿಸುತ್ತೇನೆ ಎಂದು ಹೇಳುವುದು ಇನ್ನೂ ಮುಜುಗರದ ವಿಷಯ.

**★ ದಲಿತ ಕವಿ ಎಂಬ ವರ್ಗೀಕರಣದ ಬಗ್ಗೆ ಏನು ಹೇಳುತ್ತೀರಿ?**

ಸಾಹಿತ್ಯ ಕಾಲಘಟ್ಟದ ಮನೋಧರ್ಮ ಎಂಬುದು ಇರುತ್ತದೆ. ನವೋದಯ, ನವ್ಯ ಮತ್ತು ಪ್ರಗತಿಶೀಲ ಸಾಹಿತ್ಯ ಸಂದರ್ಭದಲ್ಲಿ ಅದು ಪ್ರಕಟವಾಗುತ್ತದೆ. ನಮ್ಮ ತಲೆಮಾರಿನ ದಲಿತ ಬಂಡಾಯ ಮನೋಧರ್ಮ ಹಸಿದವರ, ನೊಂದವರ ನೋವಿಗೆ ಮಿಡಿಯುವುದಾಗಿತ್ತು. ಇದನ್ನೆಲ್ಲಾ ಅಧ್ಯಯನದ ಅನುಕೂಲದ ದೃಷ್ಟಿಯಿಂದ ವಿಮರ್ಶಕರು ವರ್ಗೀಕರಿಸುತ್ತಾರೆ. ಯಾವ ಹಣೆ ಪಟ್ಟಿಯೂ ಶಾಶ್ವತವಲ್ಲ. ಸಾಹಿತ್ಯ ಮಾತ್ರ ಶಾಶ್ವತ. ಪ್ರೀತಿಯಿಂದ ಅಭಿಮಾನದಿಂದ ಹೇಳಿದರೆ ಅದು ತಪ್ಪಲ್ಲ. ಆದರೆ, ಶೇ.18 ಎಂಬ ಧಾಟಿಯಲ್ಲಿ ಹೇಳಿದರೆ ಅದನ್ನು ಒಪ್ಪಲ್ಲ.

**★ *ಸಾಹಿತ್ಯದಲ್ಲೂ ಮೀಸಲಾತಿ ಬೇಕಾ?***

ಸಾಹಿತ್ಯಕ್ಕೆ ಮೀಸಲಿನ ಅವಶ್ಯಕತೆ ಇಲ್ಲ. ಹೊಸ ತಲೆಮಾರಿನ ಹಾಗೂ ಕೆಳಸ್ತರದ ಸಮುದಾಯದ ಬರಹಗಾರರನ್ನು ಬೆಂಬಲಿಸಬೇಕಾಗುತ್ತದೆ. ಅವರ ಬರಹವನ್ನು ಓದಿ ಸರಿ ತಪ್ಪುಗಳನ್ನು ಒಪ್ಪವಾಗಿ ಹೇಳಿ ಅವರನ್ನು ಬರಹದಲ್ಲಿ ತೊಡಗುವಂತೆ ಪ್ರೋತ್ಸಾಹಿಸಿದರೆ ಸಾಕು.

**★ *ದಲಿತ ಸಂಘಟನೆಗಳು ಒಡೆದಿವೆ. ಕೆಲವರು ಬಲಪಂಥೀಯ ಧೋರಣೆ ಹೊತ್ತು ಮೆರೆದರೆ ಸಮುದಾಯದ ಮೇಲೆ ಎಂತಹ ಪರಿಣಾಮ ಬೀರುತ್ತದೆ?***

ದಲಿತ ಸಂಘಟನೆಗಳು ಸಾಮಾನ್ಯ ಕಾರ್ಯಕ್ರಮದ ಆಧಾರದ ಮೇಲೆ ಒಂದಾಗಬೇಕು. ಹಾಗೆಂದು ಎಲ್ಲಾ ವಿಲೀನ ಆಗಬೇಕಿಲ್ಲ. ನಾಯಕರು ತಮ್ಮ ಮುಂದಾಳತ್ವವನ್ನು ಇಟ್ಟುಕೊಂಡು ಒಂದೇ ವೇದಿಕೆಗೆ ಬರಬೇಕು. ಈ ನಿಟ್ಟಿನಲ್ಲಿ ದೇವನೂರು ಪ್ರಯತ್ನ ಮಾಡುತ್ತಿದ್ದಾರೆ. ನಾನೂ ಪ್ರಯತ್ನ ಮಾಡುತ್ತಿದ್ದೇನೆ. ಜಿಲ್ಲಾ ದಲಿತ ನಾಯಕರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದೇನೆ. ಹಲವಾರು ಜಿಲ್ಲೆಗಳಿಗೆ ಪ್ರವಾಸ ಮಾಡುತ್ತೇನೆ. ಇದು ಒಂದು ದಿನ ಕೈಗೂಡುತ್ತದೆ ಎಂದೆನಿಸುತ್ತದೆ. ದಲಿತ ಸಂಘಟನೆಗಳು ಜನಪರ ಧೋರಣೆ ಇಟ್ಟುಕೊಂಡು ಸಮಾನತೆಯ ಸಮಾಜವನ್ನು ಸೃಷ್ಟಿಸುವ ಕನಸನ್ನು ಜನರಲ್ಲಿ ಬಿತ್ತಬೇಕು. ಅದಕ್ಕೆ ವ್ಯತಿರಿಕ್ತ ವಿಚಾರವನ್ನು ಪ್ರಚುರಪಡಿಸಿದರೆ ಅದನ್ನು ಜನರೇ ಒಪ್ಪುವುದಿಲ್ಲ.

**★ ದಲಿತ ನಾಯಕರು ಭ್ರಷ್ಟರಾಗಿದ್ದಾರೆ ಎನ್ನುವ ಆರೋಪಕ್ಕೆ ಏನನ್ನುತ್ತೀರಿ?**

ಸಾಕಷ್ಟು ನಾಯಕರು ತಮ್ಮ ವೈಯಕ್ತಿಕ ವಿಷಯಗಳನ್ನು ಮರೆತು, ಸಮುಷ್ಟಿ ಪ್ರಜ್ಞೆಯಲ್ಲಿ ದುಡಿದಿದ್ದಾರೆ. ಒಳ್ಳೆಯ ಕೆಲಸಗಳನ್ನು ಮಾಡುತ್ತಲೇ ಬಂದಿದ್ದಾರೆ. ನೀವು ಹೇಳುವ ಆರೋಪ ಕೆಲವು ಸಂದರ್ಭದಲ್ಲಿ ನಿಜ ಆಗಿರಬಹುದು. ಆದರೆ ಸಮುದಾಯದ ಕೆಲಸ ಮಾಡುತ್ತಿದ್ದಾರೆ. ಕೆಲವರೇನಾದರೂ ದಾರಿ ತಪ್ಪಿದ್ದರೂ, ಅದಕ್ಕೆ ಕಮ್ಯುನಿಸ್ಟ್ ಅಥವಾ ಆರ್‌ಎಸ್‌ಎಸ್ ರೀತಿಯಲ್ಲಿ ಕೇಡರ್ ಬೇಸ್ ಸಂಘಟನೆ ರಚಿಸಿಲ್ಲ. ಇದು ಕೂಡ ಒಂದು ಕೊರತೆ. ಪೂರ್ಣಾವಧಿ ಕಾರ್ಯಕರ್ತನಿಗೆ ಸಂಘಟನೆಯ ನಿಧಿಯಿಂದ ನಿಯಮಿತ ಸಂಭಾವನೆ ಕೊಟ್ಟರೆ ಸಂಘಟನೆಯ ಸಣ್ಣಪುಟ್ಟ ಲೋಪ ದೋಷಗಳನ್ನು ಸರಿಪಡಿಸಬಹುದು.

**★ *ಈ ಬಾರಿ ಸಮ್ಮೇಳನದ ಅಧ್ಯಕ್ಷ ಸ್ಥಾನ ದಲಿತ ಸಾಹಿತಿಗೆ ಎಂದು ಪರಿಷತ್ತು ಹೇಳಿದ್ದು, ಎಲ್ಲೋ ಮೀಸಲನ್ನು ಪ್ರತಿಪಾದಿಸುತ್ತಿದೆ ಎಂದೆನಿಸುವುದಿಲ್ಲವೆ?***

ಮೀಸಲಾತಿ ಎಂದು ಭಾವಿಸಬಾರದು ಎಂಬ ಸ್ಪಷ್ಟನೆಯನ್ನು ಪರಿಷತ್ತಿನ ಅಧ್ಯಕ್ಷ ಹಾಲಂಬಿ ನೀಡಿದ್ದಾರೆ. ಇದು ಪ್ರತಿಭೆ ಮತ್ತು ಅವರ ಅರ್ಹತೆಗೆ ಸಂದ ಗೌರವ ಎಂದಿದ್ದಾರೆ. 80 ಸಮ್ಮೇಳನ ನಡೆದರೂ ತಳ ಸಮುದಾಯದ ಒಬ್ಬರೂ ಸಮ್ಮೇಳನಾಧ್ಯಕ್ಷರು ಆಗಿಲ್ಲ ಎನ್ನುವ ಕಾಳಜಿಗೆ ಅವರು ಒತ್ತುಕೊಟ್ಟಿದ್ದಾರೆ.